# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 730 |
| ಸದಸ್ಯರ ಹೆಸರು | ಶ್ರೀಮತಿ ಭಾರತಿ ಶೆಟ್ಟಿ |
| ಉತ್ತರಿಸುವ ದಿನಾಂಕ | 12.07.2023 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ದೇವಾಲಯಗಳಿವೆ; ಇವುಗಳಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿರುವ ದೇವಾಲಯಗಳ ಸಂಖ್ಯೆ ಎಷ್ಟು; | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಈ ಕೆಳಕಂಡಂತೆ ಪ್ರವರ್ಗವಾರು ಸಂಸ್ಥೆಗಳು ಒಳಗೊಂಡಿರುತ್ತವೆ.<br><br>**ಕ್ರ ಸಂ** \| **ಪ್ರವರ್ಗ** \| **ದೇವಾಲಯಗಳ ಸಂಖ್ಯೆ**<br>1 \| ಎ \| 205<br>2 \| ಬಿ \| 193<br>3 \| ಸಿ \| 34165<br>**ಒಟ್ಟು** \| **34563**<br><br>(ಸಂಸ್ಥೆಗಳ ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ)<br><br>ಆದರೆ, ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡದ ದೇವಾಲಯಗಳ ವಿವರಗಳು ಲಭ್ಯವಿರುವುದಿಲ್ಲ. |
| ಆ) | ಕಳೆದ 5 ವರ್ಷಗಳಲ್ಲಿ ಸದರಿ ದೇವಾಲಯಗಳಿಂದ ಸರ್ಕಾರಕ್ಕೆ ಸಂಗ್ರಹವಾಗುತ್ತಿರುವ ಮೊತ್ತವೆಷ್ಟು; ಇದನ್ನು ಯಾವ ರೀತಿಯಲ್ಲಿ ಖರ್ಚು ಮಾಡಲಾಗುತ್ತಿದೆ; (ಅಂಕಿ ಅಂಶಗಳೊಂದಿಗೆ ಮಾಹಿತಿ ಒದಗಿಸುವುದು) | ಧಾರ್ಮಿಕ ದತ್ತಿ ಇಲಾಖೆಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಿಂದ ಸರ್ಕಾರಕ್ಕೆ ಯಾವುದೇ ಮೊತ್ತವು ಸಂಗ್ರಹವಾಗುವುದಿಲ್ಲ.<br><br>ಆದರೆ ಅಧಿಸೂಚಿತ ಸಂಸ್ಥೆಗಳಲ್ಲಿ ಸಂಗ್ರಹವಾಗುವ ಮೊತ್ತಗಳನ್ನು ಆಯಾಯಾ ದೇವಾಲಯಗಳ ಖಾತೆಗೆ ಜಮಾ ಮಾಡಲಾಗುತ್ತದೆ. ಹೀಗೆ ಸಂಗ್ರಹವಾಗುವ ಆದಾಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ 1997 ರ ಕಾಯ್ದೆಯ ಕಲಂ 36(1)ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯ ದನ್ವಯ ಆಯಾಯಾ ದೇವಾಲಯದ ಆದಾಯವನ್ನು ಆಯಾಯಾ ದೇವಾಲಯದ ನಿತ್ಯ ಕಟ್ಲೆ, ಹೆಚ್ಚುಕಟ್ಲೆ, ಜಾತ್ರೆ, ಹಬ್ಬಗಳು, ಸಿಬ್ಬಂದಿ ವೆಚ್ಚ ಹಾಗೂ ಅಭಿವೃದ್ಧಿ ಕಾರ್ಯಗಳು ಮತ್ತು ನಿರ್ವಹಣೆಗೆ ಬಳಸಲಾಗುತ್ತದೆ. |
| ಇ) | ಕಳೆದ 5 ವರ್ಷದಲ್ಲಿ ಸರ್ಕಾರ ಮುಜರಾಯಿ ಇಲಾಖೆಯ ಯಾವ ರೀತಿಯ ದೇವಾಲಯಗಳಿಗೆ ಎಷ್ಟೆಷ್ಟು ಅನುದಾನ ನೀಡಲಾಗಿದೆ; (ಅಂಕಿ ಅಂಶಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | ಕಳೆದ 5 ವರ್ಷದಲ್ಲಿ ಸರ್ಕಾರದಿಂದ ಮುಜರಾಯಿ ಮತ್ತು ಮುಜರಾಯೇತರ ಧಾರ್ಮಿಕ ಸಂಸ್ಥೆಗಳ ದುರಸ್ತಿ, ಜೀರ್ಣೋದ್ಧಾರ, ನಿರ್ಮಾಣ ಹಾಗೂ ಮೂಲಭೂತ ಸೌಕರ್ಯಕ್ಕಾಗಿ ವಿವಿಧ ಯೋಜನೆಗಳಡಿಯಲ್ಲಿ ರೂ.211948.18ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, (ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ) |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಾಲಯಗಳ ಅಭಿವೃದ್ಧಿ ಹಾಗೂ ಪರಿಸರ ಸ್ವಚ್ಛತೆಗೆ ಸರ್ಕಾರ ಯಾವ ರೀತಿ ಆದ್ಯತೆ ನೀಡಿ ಜಾರಿಗೆ ತರುತ್ತಿದೆ? (ವಿವರ ಒದಗಿಸುವುದು) | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ರಾಜ್ಯದಲ್ಲಿರುವ ಪ್ರವರ್ಗ 'ಎ' ಮತ್ತು 'ಬಿ' ಗುಂಪಿನ ದೇವಾಲಯಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಸುತ್ತೋಲೆ ಸಂಖ್ಯೆ: ಸಿಎನ್‌ಆರ್ - 1/ಸಿಆರ್/346/2010-11 ದಿನಾಂಕ; 22.03.2011ರಲ್ಲಿ 31 ಅಂಶಗಳನ್ನೊಳಗೊಂಡಂತೆ ಸುತ್ತೋಲೆಯನ್ನು ಹೊರಡಿಸಲಾಗಿದೆ.<br><br>ಅದರಂತೆ ದೇವಾಲಯಗಳಲ್ಲಿ ಅಗತ್ಯವಿರುವ ಶೌಚಾಲಯ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ಕೈ ಕಾಲು ಸ್ವಚ್ಛತೆಗೆ ನೀರಿನ ವ್ಯವಸ್ಥೆ ಹಿರಿಯರಿಗೆ ಕುಳಿತುಕೊಳ್ಳಲು ಆಸನದ ವ್ಯವಸ್ಥೆ, ಅವಶ್ಯಕವಿರುವ ಕಡೆ ವಸತಿ ವ್ಯವಸ್ಥೆ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ಸೂಚಿಸಲಾಗಿದ್ದು, ಅದರಂತೆ ಕ್ರಮ ವಹಿಸಲು ಎಲ್ಲಾ ಜಿಲ್ಲಾಧಿಕಾರಿಗಳು/ ಉಪವಿಭಾಗಾಧಿಕಾರಿಗಳು/ ತಹಶೀಲ್ದಾರ್/ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.<br><br>ಸರ್ಕಾರದ ಸುತ್ತೋಲೆ ಸಂ; ಕಂಇ 83 ಮುಆಬಿ 2015 ದಿನಾಂಕ;29.08.2015ರಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವ ರಾಜ್ಯದ ಸಮೂಹ ಎ,ಬಿ ಮತ್ತು ಸಿ ಪ್ರವರ್ಗದ ದೇವಾಲಯಗಳಲ್ಲಿ ಸ್ವಚ್ಛ ಮಂದಿರ ಅಭಿಯಾನ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಹಾಗೂ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆಯ ಸುತ್ತೋಲೆ ಸಂಖ್ಯೆ: ಎಡಿಎಂ 11/ಇತರೆ/ಸಿಆರ್/219/2014-15 ದಿನಾಂಕ;02.12.2022ರಲ್ಲಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಲ್ಲಿ ಪ್ಲಾಸ್ಟಿಕ್ ನಿರ್ಬಂಧಿಸುವುದು ಹಾಗೂ ಸ್ವಚ್ಛತೆಯನ್ನು ಕಾಪಾಡಲು ಸುತ್ತೋಲೆಯನ್ನು ಹೊರಡಿಸಿ ಸದರಿ ಸುತ್ತೋಲೆಗಳನ್ವಯ ಕ್ರಮ ಕೈಗೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳು/ ಉಪವಿಭಾಗಾಧಿಕಾರಿಗಳು/ ತಹಶೀಲ್ದಾರ್/ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. |

ಸಂಖ್ಯೆ: ಕಂಇ 71 ಮುಸಪ್ರ 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

ಪ್ರಶ್ನೆ ಸಂಖ್ಯೆ: 130

**ರಾಜ್ಯದಲ್ಲಿರುವ ಒಟ್ಟು ಅಧಿಸೂಚಿತ ಸಂಸ್ಥೆಗಳ ವಿವರದ ಪಟ್ಟಿ** ಅನುಬಂಧ-1

(ಸರ್ಕಾರದ ಅಧಿಸೂಚನೆ ಸಂಖ್ಯೆ:RD 87 MUAABI 2012 DT:29.09.2012 ರಂದು ಪ್ರಕಟಿಸಿರುವ ಅಧಿಸೂಚಿತ ಸಂಸ್ಥೆಗಳ ಪಟ್ಟಿಯ ಆಧಾರದ ಮೇರೆಗೆ)

(ಜಿಲ್ಲಾವಾರು ಅಂಕಿ ಅಂಶ)

| ಕ್ರ ಸಂ | ಜಿಲ್ಲೆ | ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿರುವ ದೇವಾಲಯಗಳ ಸಂಖ್ಯೆ | ಅಧಿಸೂಚಿತ ಸಂಸ್ಥೆಗಳ ಪಟ್ಟಿಗೆ ಸೇರ್ಪಡೆ ಮಾಡಲಾದ ಸಂಸ್ಥೆಗಳ ಸಂಖ್ಯೆ | ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತು ಪಡಿಸಲಾದ ಸಂಸ್ಥೆಗಳ ಸಂಖ್ಯೆ | ಪ್ರಸ್ತುತ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ನಗರ | 1016 | 90 | 02 | 1104 |
| 2 | ಬೆಂಗಳೂರು ಗ್ರಾಮಾಂತರ | 1076 | 69 | 05 | 1140 |
| 3 | ಬಾಗಲಕೋಟೆ | 1167 | 0 | 01 | 1166 |
| 4 | ಬಳ್ಳಾರಿ | 1294 | 5 | 0 | 1299 |
| 5 | ಬೆಳಗಾವಿ | 3803 | 08 | 05 | 3806 |
| 6 | ವಿಜಯಪುರ | 551 | 01 | 01 | 551 |
| 7 | ಬೀದರ್ | 533 | 0 | 03 | 530 |
| 8 | ಚಾಮರಾಜನಗರ | 414 | 0 | 0 | 414 |
| 9 | ಚಿಕ್ಕಬಳ್ಳಾಪುರ | 1069 | 03 | 0 | 1072 |
| 10 | ಚಿಕ್ಕಮಗಳೂರು | 869 | 11 | 0 | 880 |
| 11 | ಚಿತ್ರದುರ್ಗ | 305 | 01 | 01 | 305 |
| 12 | ದಕ್ಷಿಣ ಕನ್ನಡ | 481 | 20 | 06 | 495 |
| 13 | ದಾವಣಗೆರೆ | 612 | 11 | 02 | 621 |
| 14 | ಧಾರವಾಡ | 938 | 02 | 10 | 930 |
| 15 | ಗದಗ | 1382 | 06 | 0 | 1388 |
| 16 | ಕಲ್ಬುರ್ಗಿ | 1629 | 03 | 02 | 1630 |
| 17 | ಹಾಸನ | 2443 | 14 | 01 | 2456 |
| 18 | ಹಾವೇರಿ | 1288 | 03 | 0 | 1291 |
| 19 | ಕೊಡಗು | 7 | 0 | 0 | 07 |
| 20 | ಕೋಲಾರ | 1320 | 08 | 0 | 1328 |
| 21 | ಕೊಪ್ಪಳ | 736 | 04 | 01 | 739 |
| 22 | ಮಂಡ್ಯ | 2008 | 113 | 01 | 2120 |
| 23 | ಮೈಸೂರು | 1313 | 02 | 04 | 1311 |
| 24 | ರಾಯಚೂರು | 1287 | 01 | 01 | 1287 |
| 25 | ರಾಮನಗರ | 865 | 02 | 0 | 867 |
| 26 | ಶಿವಮೊಗ್ಗ | 643 | 01 | 01 | 643 |
| 27 | ತುಮಕೂರು | 2462 | 0 | 01 | 2461 |
| 28 | ಉಡುಪಿ | 812 | 09 | 12 | 809 |
| 29 | ಉತ್ತರಕನ್ನಡ | 769 | 02 | 70 | 701 |
| 30 | ಯಾದಗಿರಿ | 1209 | 03 | 0 | 1212 |
| | ಒಟ್ಟು | 34301 | 392 | 130 | 34563 |

ಸಂಯುಕ್ತ ಪರವಾಗಿ
ಮುಜರಾಯಿ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ,
ಚಾಮರಾಜಪೇಟೆ, ಬೆಂಗಳೂರು-560 018

ಚುಕ್ಕಿ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 730 ಅನುಬಂಧ-2

# ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು

## ಕಳೆದ ಐದು ವರ್ಷಗಳಲ್ಲಿ ಸರ್ಕಾರದಿಂದ ಯೋಜನೆವಾರು ಬಿಡುಗಡೆ ಮಾಡಿದ ಅನುದಾನಗಳ ವರ್ಷಾವಾರು ವಿವರಗಳು

(ಮೊತ್ತ ರೂ. ಲಕ್ಷಗಳಲ್ಲಿ)

| ಕ್ರಸಂ | ಶೀರ್ಷಿಕೆ | 2018-19 | 2019-20 | 2020-21 | 2021-22 | 2022-23 | ಒಟ್ಟು |
|---|---|---|---|---|---|---|---|
| 1 | 2250-00-103-5-09<br>ಆರಾಧನಾ ಯೋಜನೆ(059) | 952.000 | 952.000 | 739.200 | 740.000 | 499.980 | 3883.1 |
| 2 | ವಿಶೇಷ ಘಟಕಯೋಜನೆ (422) | 760.000 | 1514.240 | 1182.720 | 1183.000 | 499.980 | 5139.9 |
| 3 | ಗಿರಿಜನ ಉಪಯೋಜನೆ (423) | 228.000 | 227.580 | 176.960 | 177.000 | 119.980 | 929.5 |
| 4 | 2053-00-800-0-12<br>ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಪರಿಶಿಷ್ಟ ಜಾತಿ ಉಪಯೋಜನೆಗೆ(422) | 0.000 | 0.000 | 0.000 | 0.000 | 1938.000 | 1938.0 |
| 5 | 2053-00-800-0-12<br>ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಗಿರಿಜನ ಉಪ ಯೋಜನೆಗೆ (423) | 0.000 | 0.000 | 0.000 | 2000.000 | 3035.990 | 5035.9 |
| 6 | 4059-80-051-0-052 (386) ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯ ಮತ್ತು ವಸತಿ ಸೌಕರ್ಯ | 1706.50 | 999.50 | 12598.00 | 6000.00 | 16999.25 | 38303.2 |
| 7 | 2250-00-103-5-12<br>ದೇವಸ್ಥಾನಗಳು ಮತ್ತು ಇತರ ಧಾರ್ಮಿಕ ಸಂಸ್ಥೆಗಳು<br>-) ಸಾಮಾನ್ಯ (103) | 1039.50 | 7179.90 | 1995.00 | 4047.50 | 26535.83 | 40797 |
| | ಬಿ) ನಿರ್ವಹಣೆ (ಮುಜರಾಯಿ ಸಂಸ್ಥೆಗಳಿಗೆ)(200) | 1783.570 | 1987.000 | 1847.000 | 1300.000 | 1499.380 | 8416 |
| 8 | 2250-00-103-5-14 (103) ರಾಜ್ಯದಲ್ಲಿನ ವಿವಿಧ ಮಠಗಳಿಗೆ ಸಹಾಯಧನ | 0.000 | 0.000 | 12737.500 | 2118.310 | 15578.000 | 3043 |
| 9 | 2075-00-101-1-01 (100)<br>ಇನಾಂ ರದ್ದಿಯಾತಿ ನಿಯಮದ ಮೇರೆಗೆ ಮಠೀಯ ಮತ್ತು ಧರ್ಮಾದಾಯ ಸಂಸ್ಥೆಗಳಿಗೆ ನೀಡುವ ಮೊಬಲಗು – ತಸ್ತೀಕ್ | 13462.00 | 13442.40 | 13459.50 | 13462.00 | 15600.000 | 6942 |
| 10 | 2506-00-101-4-01 (101)<br>ವರ್ಷಾಸನ ವೆಚ್ಚಗಳು | 1064.50 | 1514.35 | 1614.00 | 1630.00 | 1821.060 | 764 |
| | ಒಟ್ಟು | 20996.07 | 27816.97 | 46349.88 | 32657.81 | 84127.45 | 21194 |

ಆಯುಕ್ತರ ಪರವಾಗಿ
ಹಿಂದೂ ಧಾರ್ಮಿಕ ಸಂಸ್ಥೆಗಳು
ಧರ್ಮಾದಾಯ ದತ್ತಿಗಳ ಇ
ಚಾಮರಾಜಪೇಟೆ, ಬೆಂಗಳೂರು-5